ಶಿವಮೊಗ್ಗ ಡಿಸ್ಟ್ರಿಕ್ಟ್ ಸಾಗರದ ತಾಲ್ಲೂಕು ಅನಂತಪುರದ ಗ್ರಾಮದಲ್ಲಿ ಬಸವಂಣಪ್ಪನೆಂಬುವನು ತನ್ನ ಸ್ವಂತ ಖಾತೆ ಪಾಳು ನಿವೇಶನವನ್ನು ಮನೆ ಕಟ್ಟುವ ಉದ್ದಿಶ್ಯ ನೆಲಗಟ್ಟು ಮಾಡಿಸುತ್ತಿರುವಾಗ್ಯೆ ಈ ಕೆಳಗೆ ವಿವರಿಸಿರುವ ನಿಧಿಯು ಸಿಕ್ಕಿತು.

ಭಂಗಾರದ ವರಹಾ ನಾಣ್ಯಗಳು 94.

ಭಂಗಾರದ ಬಾಖುತು ಅರ್ಧವರಹ ನಾಣ್ಯಗಳು 51.

ಮತ್ತು ನಾಣ್ಯದಲ್ಲಿ ಕತ್ತರಿಸಿದ 2 ತುಂಡು. ಇವುಗಳೆಲ್ಲಾ ಸೇರಿ ಒಟ್ಟು ನಾಣ್ಯಗಳ ತೂಕ 35 ರೂಪಾಯಿ 4 ಆಣೆ.

ಭಂಗಾರದ ವಂಕಿ ಜೊತೆ ಒಂದು (ಅದದು 2) ಹಳೇ ಇಕ್ಕೇರಿ ಬಂಣ ತೂಕ 9 ರೂಪಾಯಿ 12 ಆಣೆ ಮತ್ತು 4 ಗುಲಗಂಜಿ.

(ಇದು ಸಿಕ್ಕಿದ ನಾಣ್ಯಗಳಿಂದ ತಯಾರಾಗಿರತಕ್ಕದ್ದು).

ಇವುಗಳೆಲ್ಲಾ ಭೂಮಿಯಲ್ಲಿ ಸಿಕ್ಕಿದ ನಾಣ್ಯಗಳಿಂದ ತಯಾರಾದ್ದು.

ಭಂಗಾರದ ಹಿಂಬಳೆ ಜೊತೆ ಒಂದು (ಅದದು 2) ಹಳೇ ಇಕ್ಕೇರಿ ಬಂಣ ತೂಕ 5 ರೂಪಾಯಿ 12 ಆಣೆ 4 ಗುಂಜಿ ಕಡಮೆ.

ಭಂಗಾರದ ತಂತಿರೇಖು ಜೋರು ಮತ್ತು ಬಿಸಿಗೆ ಜೊರುಗಳು ಸಹ ತೂಕ 1 ರೂಪಾಯಿ 12 ಆಣೆ ಹಳೇ ಇಕ್ಕೇರಿ ಬಂಣ.

ಭಂಗಾರದ ಗಟ್ಟು ಒಂದು ಜೊರುಗಳು ಸಹ ಸೇರಿ 3 ರೂಪಾಯಿಗೆ 2 ಆಣೆ ಮತ್ತು 5 ಗುಲಗಂಜಿ ತೂಕ ಕಡಮೆ ಇದೆ. ಹಳೇ ಇಕ್ಕೇರಿ ಬಂಣ.

ಭಂಗಾರದ ಸುತ್ತುಂಗರ ಒಂದು 1 ವರಹಾ ತೂಕವಿರುತ್ತೆ ಬಂಣ ಇಕ್ಕೇರಿ ವರಹ.

ನಗದು 30 ರೂಪಾಯಿಗಳು ಈ ರೂಪಾಯಿಗಳು ಸಿಕ್ಕಿದ ನಾಣ್ಯಗಳ ವಾರಾಟದಿಂದ ಉತ್ಪತ್ತಿ ಆದ್ದು.

2. ಸದರಿ ವಿಶಿಷ್ಟ ನಿಧಿಯೇ ಆಗಲಿ ಅಥವಾ ಅದರ ಭಾಗಕ್ಕಾಗಲಿ ಹಕ್ಕುದಾರರೆಲ್ಲರೂ ಈ ಇಸ್ತಿಹಾರ್ ಮೈಸೂರು ಗೆಜೆಟ್ಟಿನಲ್ಲಿ ಪ್ರಯಿಪ್ರಾದ ತಾರೀಖು ಲಾಗಾಯಿತು 6 ತಿಂಗಳೊಳಗೆ ತಮ್ಮ ಹಕ್ಕು ಇರತಕ್ಕ ಬಗ್ಯೆ ಪರಭಾರು ಕೊಟ್ಟು ಅವರಿಗೆ ಇರತಕ್ಕ ಹಕ್ಕನ್ನು ಸ್ಥಾಪಿಸಿಕೊಳ್ಳತಕ್ಕ ಬಗ್ಯೆ ಖುದ್ದಾಗಿಯಾಗಲಿ ಪಜಂಟರ ಮೂಲಕವಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷ್ಣರವರ ಆಫೀಸಿನಲ್ಲಿ 1909ನೆ ಇಸವಿ ಅಕ್ಟೋಬರು 2ನೆ ತಾರೀಖು ದಿವಿ 11 ಘಂಟೆಗೆ ಸರಿಯಾಗಿ ಹಾಜರಾಗಬೇಕು.

ಆರ್. ಟಿ. ಮಹದೇವರಾವ್,
ಘಾರ್ ಡೆಪ್ಯುಟಿ ಕಮಿಷನರ್.

1909ನೆ ಇಸವಿ ಫೆಬ್ರವರಿ 6ನೆ ಶನಿವಾರ ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟ್ ಬೋರ್ಡ್ ವಿಾಟಿಂಗ್ ಪ್ಲೇಸೀಡಿಂಗ್ಸ್ ಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗತಃ ಮೆಂಬರುಗಳು.

1. ಮಿ|| ಎಂ. ನಾರಾಯಣರಾಯರವರು, ಡೆಪ್ಯುಟಿ ಕಮಿಷನರ್ ಮತ್ತು ಪ್ರೆಸಿಡೆಂಟರು.
2. ,, ಟಿ. ತಂಬೂಕೆಟ್ಟು, ಬಿ. ಎ. ಶಿವಮೊಗ್ಗ ಡಿವಿಜ್ ಅಸಿಸ್ಟೆಂಟ್ ಕಮಿಷನರು.
3. ,, ಎಂ. ಶ್ರೀನಿವಾಸ ಮೂರ್ತಿಗಳು ಸಾಗರ ಡಿವಿಜ್ ಅಸಿಸ್ಟೆಂಟ್ ಕಮಿಷನರವರು.
4. ,, ಎ. ವೈತ್ಯನಾಜಯ ಐಯ್ಯರ್, ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಮತ್ತು ವೈಸ್ ಪ್ರೆಸಿಡೆಂಟರು.
5. ,, ಆರ್. ವಿ. ಸುದರಂ ಐಯ್ಯರ್, ಬಿ. ಎ., ಬಿ. ಸಿ. ಇ., ಶಿವಮೊಗ್ಗ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರು.
6. ,, ಮಹಮದ್ ಉಸ್ಮಾನ್ ಸಾಹೇಬರು, ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರು.
7. ,, ತಿರುಮಲಾಚಾರ್ಯ, ಶಿವಮೊಗ್ಗ ಡಿಸ್ಟ್ರಿಕ್ಟ್ ಸ್ಕೂಲ್ ಡೆಪ್ಯುಟಿ ಇನ್ಸ್‌ಪೆಕ್ಟರವರು.

ಉದ್ಯೋಗಸ್ಥರಲ್ಲದ ಮೆಂಬರುಗಳು.

8. ಮಿ|| ನಾಡಿಗ ಶೀತಾರಾಮಪ್ಪನವರು, ಶಿವಮೊಗ್ಗ.
9. ,, ಉಬ್ರಾಣಿ ಶ್ಯಾನುಭೋಗ ಅಪ್ಪಾಜಪ್ಪನವರು, ಚನ್ನಗಿರಿ.
10. ,, ನಾಡಿಗ ಗೋಪಾಲಪ್ಪನವರು, ಹೊನ್ನಾಳಿ.
11. ,, ಸಾಲೂರ ಭವಾನಿರಾಯರು, ಶಿಕಾರಿಪುರ.
12. ,, ಬರದವಳ್ಳಿ ಗುರಪ್ಪಗೌಡರು, ಸಾಗರ ತಾಲ್ಲೂಕು.
13. ,, ಹೆಚ್. ರಾಮರಾಯರು, ಹುಯಿಜೆದಕಟ್ಟೆ, ತೀರ್ಥಹಳ್ಳಿ ತಾಲ್ಲೂಕು.
14. ,, ಸಿ. ಸುಬ್ಬರಾಯರು, ಬಿ. ಎ., ಬಿ. ಎಲ್., ಅಡ್ವೋಕೇಟ್, ಶಿವಮೊಗ್ಗ.
15. ,, ತಾಗರ್ತಿ ದೇವಪ್ಪನವರು, ಶಿಕಾರಿಪುರ.
16. ,, ರಟ್ಟಿಹಳ್ಳಿ ಪುಟ್ಟಪ್ಪನವರು, ಸಾಗರ ತಾಲ್ಲೂಕು.
17. ,, ದೇವಂಗಿ ರಾಮಣ್ಣಗೌಡರು, ತೀರ್ಥಹಳ್ಳಿ.
18. ,, ಎ. ನರಸಿಂಹಯ್ಯಂಗಾರ್ರು, ಸಾಗರ.

ಗೈರ್ ಹಾಜರು.

1. ಮಿ॥ ನಾಡಿಗ ಭಾಸ್ಕರರಾಯರು, ಸೊರಬ ತಾಲ್ಲೂಕು.
2. ,, ಶ್ಯಾಮಣ್ಣ ಉಡುಪರು, ನಗರ ತಾಲ್ಲೂಕು.
3. ,, ನಾಡಿಗ ರಾಘವೇಂದ್ರಪ್ಪನವರು, ಕುಂಸಿ ಸಬ್ ತಾಲ್ಲೂಕು.
4. ,, ಖಾಜಿ ಸೈಯದ್ ಮಹಮ್ಮದ್ ಸಾಹೇಬರು, ಶಿವಮೊಗ್ಗ.
5. ,, ರೆವೆರೆಂಡ್ ಡಬ್ಬಿಯು ಟಾಂಲಿನ್ಸರವರು, ಶಿವಮೊಗ್ಗ.
6. ,, ರೆವರೆಂಡ್ ಫಾದರ್ ಎಫ್. ಪಿಲ್ಲೆಯವರು, ಶಿವಮೊಗ್ಗ.
7. ,, ವಾಮನರಾಯರು, ಸಾಹುಕಾರ್, ನಗರ.

1. ಸುಪಾರಿ ಹಾಳತದನೇಲೆ ವಿಧಿಸಿದ್ದ ಒಂದು ಆಣೆ ಸೆಸ್ಸಿನ ಶೇಕಡಾ 76 ಅಂಶವು ವಜಾ ಆಗಿರುವದರಿಂದ ಮುಂಬಾದ ನಷ್ಟಕ್ಕೆ ಪ್ರತಿಯಾಗಿ ನಂಬರು 1684-93—ಲ್ಯಾ. ರೆ. 490-06-3ನೆ ಮರ್ಕುಂ 1907ನೆ ಇಸವಿ ಸೆಪ್ಟಂಬರ್ ತಾರೀಖು 2ನೆ ಗವರ್ನಮೆಂಟ್ ಪ್ರೊಸೀಡಿಂಗ್ಸಿನಿಂದ ತೋಟಗಳ ಮೇಲೆ ವಿಧಿಸುವ ಸ್ಪೆಷಲ್ ಸುಂಕದ ಶೇಕಡ 76 ಅಂಶವನ್ನು ಡಿಸ್ಟ್ರಿಕ್ಟ್ ಫಂಡಿಗೆ ಕೊಡುವದಕ್ಕೆ ಆಗುವದಿಲ್ಲವಾಗಿ ನಂಬರು 5873-81—ಲೋ. ಬೋ. 176-08-2ನೆ 1908ನೆ ಇಸವಿ ಡಿಸೆಂಬರ್ 19ನೆ ತಾರೀಖು ಮರ್ಕುಂ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಗಿ ರಿಕಾರ್ಡು ಮಾಡಲಾಯಿತು. ಮತ್ತು ಸುಪಾರಿ ಹಾಳತವನ್ನು ವಜಾ ಮಾಡಿರುವದ್ದರಿಂದ ಡಿಸ್ಟ್ರಿಕ್ಟ್ ಫಂಡಿಗೆ ಉಂಟಾದ ಉತ್ಪನ್ನದ ನಷ್ಟಕ್ಕೆ ಬೇರೆ ಯಾವ ವಿಧದಿಂದ ಹಣ ಬರುವಹಾಗೆ ಮಾಡಬೇಕೆಂಬ ವಿಷಯವು ಮುಂದಿನ ಮೀಟಿಂಗಿನಲ್ಲಿ ಚರ್ಚಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

2. ಹೊಳಹೊನ್ನೂರು ನೇಟಿವ್ ವೈದ್ಯಶಾಲೆ ಪಂಡಿತರಿಗೆ ವೈದ್ಯಶಾಲಾ ಮನೆ ಬಾಡಿಗೆ ಕೊಡುವುದಕ್ಕೆ ಆಗುವದಿಲ್ಲವಾಗಿ ನಂಬರು 5331-8—ಲೋ. ಬೋ. 109-08-2ನೆ ಮರ್ಕುಂ 1903ನೆ ಡಿಸೆಂಬರು 3ನೆ ಗವರ್ನಮೆಂಟು ಪ್ರೊಸೀಡಿಂಗ್ಸು ಓದಲಾಗಿ ರಿಕಾರ್ಡು ಮಾಡಲಾಯಿತು. ಸದರಿ ವೈದ್ಯರು ಆಸ್ಪಳಿ ನಿವಾಸಿಕರಲ್ಲದಿರುವದರಿಂದ, ಅವರಿಗೆ ಸಲ್ಲುವ ಸಂಬಳದಿಂದ ಮನೆ ಬಾಡಿಗೆ ಕೊಡಬಹುದೆಂತ ಭಾವಿಸುವದಕ್ಕಾಗುವದಿಲ್ಲವೆಂತಲೂ, ಸದರಿ ಬಾಡಿಗೆಯು ಡಿಸ್ಟ್ರಿಕ್ಟ್ ಫಂಡಿನಿಂದ ಕೊಡತಕ್ಕದ್ದು ಯುಕ್ತವೆಂತ ತೀರ್ಮಾನಿಸಲಾಯಿತು.

3. ತಾಲ್ಲೂಕುಗಳಿಗೆ ನೇಮಿಸುವದಕ್ಕೆ ತರಬೇತಾದ ಸ್ಯಾನಿಟೆರಿ ಮತ್ತು ಅಸಿಸ್ಟೆಂಟ್ ಸ್ಯಾನಿಟೆರಿ ಇನ್‌ಸ್ಪೆಕ್ಟರುಗಳನ್ನು ಕಳುಹಿಸುವ ವಿಷಯದಲ್ಲಿ ತಲ್ಪಿದ ನಂಬರು 2859ನೆ ಮರ್ಕುಂ 1909ನೆ ಜನವರಿ 16ನೆ ಸ್ಯಾನಿಟೆರಿ ಕಮಿಷನರವರ ಲೆಟರು ಓದಲಾಗಿ ರಿಕಾರ್ಡು ಮಾಡಲಾಯಿತು.

4. 1908-09ನೆ ಸಾಲಿನ ಬಜೆಟ್ ಗಾತ್ರವನ್ನು ಉಪಯೋಗಿಸುವ ವಿಷಯದಲ್ಲಿ ಹೊಸ ಸ್ಟೇಟ್‌ಮೆಂಟಿನೊಡನೆ ತಲ್ಪಿದ ಶಿವಮೊಗ್ಗ ಡಿವಿಜ್ ಎಗ್ಜಿಕ್ಯುಟಿವ್ ಇಂಜನಿಯರವರ ನಂಬರು 39—11-1-09ನೆ ಡಾಕೆಟ್ ಓದಲಾಗಿ ಸ್ಯಾಂಕ್ಷನ್ ಮಾಡಲಾಯಿತು. ಮತ್ತು ಇದರಂತೆ ಉಪಯೋಗಿಸುವದರಿಂದ ಇನ್ನು ಹೆಚ್ಚಿಗೆ ನೊಬಲಗಿನ ಖರ್ಚಿಗೆ ಆಸ್ಪದ ಕೊಡಕೂಡದೆಂತ ತೀರ್ಮಾನಿಸಲಾಯಿತು.

5. ತೀರ್ಥಹಳ್ಳಿ ತಾಲ್ಲೂಕು ಸಬ್ ರಿಜಿಸ್ಟ್ರಾರನ್ನು ಅಲ್ಲಿ ತಾಲ್ಲೂಕು ಬೋರ್ಡು ವೈಸ್ ಪ್ರೆಸಿಡೆಂಟರನ್ನಾಗಿ ನೇಮಿಸಬೇಕೆಂತ ತಲ್ಪಿದ ಸದರಿ ತಾಲ್ಲೂಕು ಬೋರ್ಡು ಪ್ರೆಸಿಡೆಂಟರವರ ನಂಬರು 831—29-10-08ನೆ ಇತ್ತಿಲ್ಲೆ ಓದಲಾಗಿ, ಲೋಕಲ್ ಬೋರ್ಡು ರೂಲ್ಸಿನ 9ನೆ ಸೆಕ್ಷ್ 2ನೆ ಕ್ಲಾಜನ್ನ ಅನುಸರಿಸಿ ಸದರಿ ವೈಸ್ ಪ್ರೆಸಿಡೆಂಟರನ್ನು ಚುನಾಯಿಸತಕ್ಕದ್ದೆಂತ ತೀರ್ಮಾನಿಸಲಾಯಿತು.

6. ಆಗಸ್ಟು ತಿಂಗಳಲ್ಲಿ 5 ದಿವಸ ಹೊನ್ನಾಳಿ ನದಿಯ ಜಂಗಾಲು ದುರಸ್ತಿಗಾಗಿ ಡಿ. ಪಿ. ಡಬ್ಲ್ಯೂ. ಯವರ ಸ್ವಾಧೀನವಿತ್ತಾದ್ದರಿಂದ ಸದರಿ ದಿವಸಗಳ ಬೆ೪ 50 ರೂಪಾಯಿಗಳನ್ನು ಕಂಟ್ರಾಕ್ಟು ಮೊಬಲಗಿನಿಂದ ವಜಾ ಮಾಡಬಹುದೆಂತ ತಲ್ಪಿದ ತಾಲ್ಲೂಕು ಅವಲ್ದಾರ್‌ರವರ ನಂಬರು 129—5-11-08ನೆ ಇತ್ತಿಲ್ಲೆ ಓದಲಾಗಿ ಸದರಿ ದಿವಸಗಳಲ್ಲಿ ಜಂಗಾಲು ಉಪಯೋಗದಲ್ಲಿರಲಿಲ್ಲವಾದ್ದರಿಂದ 50 ರೂಪಾಯಿಗಳು ವಜಾ ಮಾಡಬಹುದೆಂತ ತೀರ್ಮಾನಿಸಲಾಯಿತು.

7. ಹೊನ್ನಾಳಿ ನದಿಯು ಈ ವರುಷ ಹಿಂದಿನ ವರುಷಗಳಿಗಿಂತಲೂ ಮುಂಚಿತವಾಗಿ ದೋಣಿಗಳ ಸಹಾಯವಿಲ್ಲದೆ ದಾಟಬಹುದಾಗಿರುವದ್ದರಿಂದ ಈ ವರುಷ ಕಂಟ್ರಾಕ್ಟು ಮೊಬಲಗಿನಲ್ಲಿ $\frac{1}{4}$ ಅಂಶವನ್ನು ಮಾಪು ಮಾಡಬಹುದೆಂತ ತಲ್ಪಿದ ಶಿವಮೊಗ್ಗ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 1162—878 ತಾರೀಖು 21—1—09ನೆ ಯಾವಿ ಓದಲಾಗಿ ಸದರಿ ಕಂಟ್ರಾಕ್ಟುದಾರರ ಅರ್ಜಿಯನ್ನು ತಾಲ್ಲೂಕು ಬೋರ್ಡಿನವರ ಅಭಿಪ್ರಾಯಕ್ಕೆ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

8. ಶಿವಮೊಗ್ಗ ತಾಲ್ಲೂಕು ವಡ್ಡರಹಟ್ಟಿ ಭೂವಿಯ ಕುಟ್ರಾಕ್ಟುದಾರ್ ಅಂಬಳಿ ಶಾಮಣ್ಣನವರು ತಮಗೆ ರಿವೈಜ್ಡ್ ದರದಂತೆ ತಾವು ಮಾಡಿದ ಕಾಮಗಾರಿನು ಹಣ ಕೊಡಿಸಬೇಕಾಗಿ ಕೇಳಿಕೊಳ್ಳುವ ವಿಷಯದಲ್ಲಿ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ ಅಭಿಪ್ರಾಯಕ್ಕೆ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

9. ಹೊಳೆಹೊನ್ನೂರು ಯೂನಿಯನ್‌ನ ಟೊಕ್ಕೆಗುತ್ತಾ ಮೊಬಲಗನ್ನು ಸದರಿ ಯೂನಿಯನ್ ಫಂಡಿಗೆ ಕೊಡಿಸಬೇಕೆಂತ ಶಿವಮೊಗ್ಗ ತಾಲ್ಲೂಕು ಬೋರ್ಡಿನವರ ತೀರ್ಮಾನದೊಂದಿಗೆ ತಲ್ಪಿದ ಶಿವಮೊಗ್ಗ ಸಬ್ ಡಿವಿಜ್ ಅಸಿಸ್ಟೆಂಟು ಕಮಿಷನರವರ ನಂಬರು 1064—1-1-09ನೆ ಯಾವಿ ಓದಲ್ಪಟ್ಟು ಲೋಕಲ್ ಬೋರ್ಡು ರೆಗ್ಯುಲೇಷನ್ ಅನುಸರಿಸಿ ಯೂನಿಯನ್‌ಗಳಿಗೆ ಟೊಕ್ಕೆಗುತ್ತಾ ಮೊಬಲಗು ಸೇರತಕ್ಕದ್ದಲ್ಲವೆಂತ ತೀರ್ಮಾನಿಸಲಾಯಿತು.

10. ನಗರ ತಾಲ್ಲೂಕು ಕೆಂಚನಾಲೆ ಗ್ರಾಮದಲ್ಲಿ ಒಂದು ದೊಡ್ಡಿ ಸ್ಥಾಪಿಸುವ ವಿಷಯಲ್ಲಿ ತಲ್ಪಿದ ಸಾಗರ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 399—13-9-08ನೆ ಯಾವಿ ಓದಲಾಗಿ ಸ್ಯಾಂಕ್ಷನ್ ಮಾಡಲಾಯಿತು.

11. ಕುಂಸಿ ಸಬ್ ತಾಲ್ಲೂಕು ವಾಸಸ್ಥ ತೋಟಪ್ಪಯ್ಯನವರಿಗೆ ಬಂದು ಅವ್ಯತವಹಿಲ್ ಹೋರಿಯನ್ನು ಕೊಡಿಸಕೊಡ ಬಹುದೆಂತ ತಲ್ಪಿದ ಶಿವಮೊಗ್ಗ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರವರ ನಂಬರು 1108—12-1-09ನೆ ಯಾದಿ ಓದಲಾಗಿ ಅನುಮೋದಿಸಲ್ಪಟ್ಟಿತು.

12. ಕೃಂಗೇರಿ ಜಹಗೀರಿಗೆ ಸೇರಿದ ಶಿವಮೊಗ್ಗ ತಾಲ್ಲೂಕಿನಲ್ಲಿರುವ ಕೆಲವು ಇನಾಂ ಗ್ರಾಮಗಳನ್ನು ಯೂನಿಯನ್ನಾಗಿ ಮಾಡುವ ವಿಷಯದಲ್ಲಿ ತಲ್ಪಿದ ಕೃಂಗೇರಿ ಜಹಗೀರ್ ಅಸಿಸ್ಟೆಂಟ್ ಕಮಿಷನರವರ ನಂಬರು 613—13-1-09ನೆ ಯಾದಿ ಓದಲಾಗಿ ಸದರಿ ವಿಷಯದಲ್ಲಿ ಇನ್ನೂ ಕೆಲವು ಸಂಗತಿಗಳು ತಿಳಿಯಬೇಕೆಂತಲೂ ಮುಂದಿನ ಮಾಪಂಗಿನಲ್ಲಿ ಪುನಃ ಚರ್ಚಿಸತಕ್ಕದ್ದೆಂತಲೂ ತೀರ್ಮಾನಿಸಲಾಯಿತು.

13. (1) ನಗರ ತಾಲ್ಲೂಕು ಕೋಣೂರು ಮತ್ತು ಕಂಪಿಕಟ್ಟೆಯ ಮುನಾಫರಖಾನೆಗಳ ರಖವಾಲೆದಾರರಿಗೆ ಗ್ರೇಡ್ ಕಂಪೌಂಡರ್ ಆಲೋವೆನ್ಸು ಕೊಡಬಹುದೇ ಎಂಬ ವಿಷಯ ಸದರಿ ನವ ರುಗಳು ಪುರಾಕಾಲ ಉದ್ಯೋಗಸ್ಥರಾದ್ದರಿಂದ ಕೊಡಬ ಹುದೆಂತಲೂ (2) ಹೊಳೆಹೊನ್ನೂರು ನೇಟಿವ್ ವೈದ್ಯಶಾಲಾಪಂಡಿತರ ವಿಷಯದಲ್ಲಿ ಸದರಿಯವರು ಆಪತಿ ನವುಕರರಲ್ಲದ್ದರಿಂದ ಅಲೋವೆನ್ಸು ಕೊಡಕೂಡದೆಂತಲೂ ತೀರ್ಮಾನಿಸಲಾಯಿತು.

14. ರೆವರೆಂಡ್ ಮಿಸ್ಟರ್ ಟಾಂಲಿರ್ಸನ್‌ರವರು ತಾವು ಫಲ್ಕೋರ್‌ಜಾದಮೇಲೆ ವಿಲಾಯಿತಿಗೆ ಹೋಗುವದ್ದರಿಂದ ಡಿಸ್ಟ್ರಿಕ್ಟ್ ಬೋರ್ಡು ಮೆಂಬರತನಕ್ಕೆ ರಾಜೀನಾಮಾಕೊಟ್ಟರುವದಾಗಿಯೂ ತನ್ನ ಬದಲಿಗೆ ಬಂದಿರತಕ್ಕ ರೆವರೆಂಡ್ ಮಿಸ್ಟರ್ ಬ್ರೋಕ ಬ್ಯಾಂಕ್‌ರನ್ನು ನೇಮಕಮಾಡಬಹುದಾಗಿ ಬರೆದ ತಾರೀಖು 27—1—09ನೆ ಲೆಟರು ಓದಲಾಗಿ ರೆವರೆಂಡ್ ಮಿಸ್ಟರ್ ಟಾಂಲಿರ್ಸನ್ ಸಾಹೇಬರವರ ರಾಜೀನಾಮೆ ಸ್ವೀಕರಿಸಬೇಕಾಗಿಯೂ ಮತ್ತು ಅವರಿಗೆ ಬದಲಿ ರೆವರೆಂಡ್ ಮಿಸ್ಟರ್ ಬ್ರೋಕಬ್ಯಾಂಕ್ ಸಾಹೇಬರವರ ನ್ನು ನೇಮಕಮಾಡಬಹುದಾಗಿ ತೀರ್ಮಾನಿಸಲ್ಪಟ್ಟಿತು.

15. ಜನರಲ್ ಮತ್ತು ರೆವಿನ್ಯು ಸೆಕ್ರಿಟರಿಯವರು ಹಾಸನದ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರಿಗೆ ವೆಟರಿನರಿ ಆಸ್ಪ ತ್ರೆಗಳ ಸಾಲೀಯಾನ ಖರ್ಚಿನ ಮೊಬಲಗನ್ನು ಮುಂದಿನಸಾಲಿನ ಬಜ್ಜಟ್ಟಿನಲ್ಲಿ ಜರಗಿಸುವ ವಿಷಯದಲ್ಲಿ ಬರೆಸಿದ ನಂಬರು 6865—26-1-09ನೆ ಲೆಟರಿನ ಕಾಯದೊಡನೆ ತಲ್ಪಿದ ಸದರಿಯವರ ನಂಬರು 6876-82—26-1-09ನೆ ಮೆಮೋರಾಂಡಂ ಓದಲಾಗಿ ಸಾಗರದಲ್ಲಿಯೂ ಮತ್ತು ಶಿವಮೊಗ್ಗದಲ್ಲಿಯೂ ಸ್ಥಾಪಿಸತಕ್ಕ ಆಸ್ಪತ್ರೆಗಳಿಗೋಸ್ಕರ 300 ವದಗಿಸಬೇಕೆಂತ ತೀರ್ಮಾನಿಸಲಾ ಯಿತು.

16. ಹೊನ್ನಾಳಿ ತಾಲ್ಲೂಕು ಆರೆಬಗಟ್ಟೆ ಮತ್ತು ಬಸವನಹಳ್ಳಿ ಇವುಗಳ ಯೂನಿಯನ್ನಿಗೆ ಬದಲಾಗಿ ಅರಬಗಟ್ಟೆ ಮತ್ತು ಸುಂಕದಕಟ್ಟೆ ಎಂಬ ಗ್ರಾಮಗಳನ್ನು ಸೇರಿಸಿ ಬಂದು ಯೂನಿಯನ್ನಾಗಿ ಮಾಡತಕ್ಕ ವಿಷಯದಲ್ಲಿ ನಂಬರು 7208—ಎಲ್. ಬಿ. 69-08-5 ಮಕ್ಕಂ 3—2—09ನೆ ನೋಟಿಫಿಕೇಷನ್ನೊಡನೆ ತಲ್ಪಿದ ಸೆಕ್ರಿಟರಿಯವರ ನಂಬರು 7209 ಮಕ್ಕಂ 3-2-09ನೆ ಮೆಮೊ ಓದಲಾಗಿ ರಿಕಾರ್ಡು ಮಾಡಲಾಯಿತು.

17. ಈ ಡಿಸ್ಟ್ರಿಕ್ಟಿನಲ್ಲಿರುವ ಲೋಕಲ್ ಫಂಡ್ ಡಿಸ್ಪೆನ್ಸರಿಗಳ ಕಾಂಪೌಂಡುಗೋಡೆ ಕಟ್ಟಡಗಳಿಗೋಸ್ಕರ 1909-10ನೆ ಸಾಲಿನ ಬಜ್ಜಟ್ಟಿನಲ್ಲಿ ಹಣವದಗಿಸುವ ವಿಷಯದಲ್ಲಿ ಪ್ರೆಸಿಡೆಂಟರವರ ಆಫೀಸಿನಿಂದ ಸೀನಿಯರ್ ಸರ್ಜ್ಯನ್ ಸಾಹೇಬರವರಿಗೆ ಬರೆದ ನಂಬ ರು 749 ಮಕ್ಕಂ 5—6—08ನೆ ಡಾಕೆಟ್ ಓದಲಾಗಿ ಹಾಲಿ ಹಣವಿಲ್ಲದ್ದರಿಂದ ಈ ವಿಷಯವು ಸದ್ಯಕ್ಕೆ ಅವಾನತ್ತಿನಲ್ಲಿರತಕ್ಕ ದ್ದೆಂತ ತೀರ್ಮಾನಿಸಲಾಯಿತು.

18. ಶಿವಮೊಗ್ಗ ಡಿಸ್ಟ್ರಿಕ್ಟ್ ಫಂಡು ಫೈನಾನ್ಸ್ ಕಮಿಟಿಯವರಿಂದ ತಯಾರಿಸಲ್ಪಟ್ಟ ಡಿಸ್ಟ್ರಿಕ್ಟ್ ಫಂಡಿನ 1909-10ನೆ ಸಾನಲಿ ಜಮಾ ಖರ್ಚಿನ ಬಜ್ಜಟ್ ಅಂದಾಜುಗಳು ಓದಲ್ಪಟ್ಟು, ಈ ಕೆಳಗೆ ನಮೂದಿಸಿರುವ ಗೋಷ್ವಾರೆಯುಳ್ಳ ಡಿಸ್ಟ್ರಿಕ್ಟ್ ಫಂಡ್ ಬಜ್ಜಟ್ ಅಂದಾಜು ಪೈಸು ಮಾಡಲ್ಪಟ್ಟಿತು ಜುಪ್ವಿ ಸಾಲ್ತಾಬೈರ್ ಬಾಕಿ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯವು ಬಜ್ಜಟ್ಟು ಅಂ ದಾಜುಗಳಿಗೆ ಲಗತ್ತು ಮಾಡಿರುವ ವಿವರಣೆ ಪತ್ರಿಕೆ ಇಲ್ಲಿ ನಮೂದಿಸಿರುತ್ತೆ.

				ರೂ.
ಗೋಷ್ವಾರೆ :—ಬರಬಹುದಾದ ಸಾಲು ಪರು ಸಿಲ್ಕು		...	...	4,425
ಬರಬಹುದಾದ ಜಮಾ	...	...	...	96,920
ಸಿಲ್ಕು ಸಹಿತ ಒಟ್ಟು ಜಮಾ		...		...101,345
ಖರ್ಚಾಗಬಹುದಾದ ಮೊಬಲಗು A. P. W. D. ಡಿಪಾರ್ಟುಮೆಂಟ್ ಮೂಲಕ ನಡಿಸುವ ಕಾಮಗಾರಿಗಳಿಗೆ ಆಗಬಹುದಾದ ಖರ್ಚು.				52,215
B ರೆವಿನ್ಯೂ ಮೂಲಕ ಡಿಟೋ		...	...	... 11,910
C. ಸಿವಿಲ್ ವರ್ಕ್ಸ್		...	...	... 32,574
			ಒಟ್ಟು	... 96,699
ಉಳಿಯಬಹುದಾದ ಸಾಲಾಖ್ಯೆರು ಸಿಲ್ಕು		...	...	... 4,646

19. ಇರೇಷನ್ ಸಸ್ ಫಂಡನ್ನು ಯಾವ ರೀತಿ ಉಪಯೋಗಿಸಬೇಕೆಂಬ ಬಗ್ಗೆ ಮತ್ತು ಯಾವ ರೀತಿ ಅದಕ್ಕೆ ಸಮ್ಮಂಧ ಪಟ್ಟ ಅಂದಾಜುಗಳನ್ನು ತಯಾರಿಸಬೇಕೆಂಬ ವಿಷಯದಲ್ಲಿ ತಲ್ಪಿದ ನಂಬರು 2086—ಎಸ್. ಬಿ. 585-07-11 ಮಕ್ಕಂ 24—9—08ನೆ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಲಾಗಿ ಮುಂದಿನ ಮಾಪಂಗಿನಲ್ಲಿ ಚರ್ಚಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

20. ಈ ಕೆಳಗೆ ನಮೂದಿಸಿರುವ ಅಂದಾಜಾಗಳನ್ನು ಮಂಜೂರು ಮಾಡಲ್ಪಟ್ಟವು.

ತಾಲ್ಲೂಕು ಹೆಸರು.	ಕಾಮಗಾರಿಗಳು.	ಮೊಬಲಗು.
		ರೂ.
ಸೊರಬ ...	1. ಚಟ್ಟೂರು ದೊಡ್ಡಿ ರಿಪೇರಿ	67
	2. ಆನವಟ್ಟಿ ಭಾವಿ ರಿಪೇರಿ	37
	3. ಕವುರೂರು ದೊಡ್ಡಿ ಮನೆ	188
ಶಿವಮೊಗ್ಗ ...	1. ಹೊಳೇಹೊನ್ನೂರು ಯೂನಿಯನ್ನಿನಲ್ಲಿ ವೆಲ್ಲಾರದೇವರ ದೇವಸ್ಥಾನದ ರಸ್ತೆ ರಿಪೇರಿ.	27
	2. ಹಂಚಿನ ಶಿದ್ಧಾಪುರದಲ್ಲಿ ಭಾವಿ ತೋಡುವದು	386
ನಗರ ...	1. ಸೋಮಯ್ಯನ ಸಾರಕ್ಕೆ ಸುತ್ತುಗೋಡೆ ಕಟ್ಟುವದು	18
	2. ಶಿವೇಶ್ವರ ಭಾವಿ ರಿಪೇರಿ	119

21. ಬೋರ್ಡಿನವರ ಒಪ್ಪಿಗೆ ನಿರೀಕ್ಷಣೆಯ ಮೇಲೆ ಪ್ರೆಸಿಡೆಂಟರವರಿಂದ ಸ್ಯಾಂಕ್ಷ್ಯ ಮಾಡಲ್ಪಟ್ಟ ಈ ಕೆಳಗೆ ನಮೂದಿಸಿರುವ ಅಂದಾಜಾಗಳು ಓದಲ್ಪಟ್ಟು ಅನುಮೋದಿಸಲ್ಪಟ್ಟವು.

ನಂಬರು.	ತಾಲ್ಲೂಕು.	ಕಾಮಗಾರಿ.	ಮೊಬಲಗು.
			ರೂ.
1	ಚನ್ನಗಿರಿ ...	ಬಸವಾಪಟ್ಟಣ ಯೂನಿಯನ್ನಿನಲ್ಲಿ ರಸ್ತೆಗಳ ಕಾಮಗಾರಿ	35
2	ಡಿಟೋ ...	ಹೋದಿಗೆರೆ ಡಿಟೋ	47
3	ಡಿಟೋ ...	ದುರ್ಗಿಗೆರೆ ಡಿಟೋ	50
4	ಡಿಟೋ ...	ತಾವರೆಕೆರೆ ಡಿಟೋ	92
5	ಡಿಟೋ ...	ಪಾಂಡವಮಟ್ಟಿ ಡಿಟೋ	222
6	ಶಿಕಾರಿಪುರ ...	ಕಡೆನಂದಿಹಳ್ಳಿ ಯೂನಿಯನ್ನಿನಲ್ಲಿ ರಸ್ತೆ ರಿಪೇರಿ	67
7	ಡಿಟೋ ...	ಸಾಲೂರು ಡಿಟೋ	30
8	ಡಿಟೋ ...	ಬೆಳಗಾವಿ ಡಿಟೋ	72
9	ಡಿಟೋ ...	ಪುಡಗಣಿ ಡಿಟೋ	56

22. ಈ ಕೆಳಗೆ ನಮೂದಿಸಿರುವ ಅಂದಾಜಾಗಳು ಬೋರ್ಡಿನವರು ಸ್ಯಾಂಕ್ಷ್ಯ ನಿರೀಕ್ಷಣೆ ಮೇರೆ ಪ್ರೆಸಿಡೆಂಟರವರಿಂದ ಕೌಂಟರ್ ಸೈನ್ ಮಾಡಲ್ಪಟ್ಟ ಎಗ್ಜಿಕ್ಯುಟಿವ್ ಇಂಜನೀಯರ್ ರವರಿಗೆ ವಾಪಸು ಮಾಡಲ್ಪಟ್ಟವುಗಳು ಅನುಮೋದಿಸಲ್ಪಟ್ಟವು.

ನಂಬರು.	ಕಾಮಗಾರಿ.	ಮೊಬಲಗು.
		ರೂ.
1	ಎಡೂರು ಇನ್‌ಸ್ಪೆಕ್ಷನ್ ಲಾಡ್ಜ್ ರಿಪೇರಿ	53
2	ಕೊಡಚಾದ್ರಿ ಮುಸಾಫರ ಬಂಗ್ಲೆ ರಿಪೇರಿ	148
3	ನಗರ ಡಿಟೋ	154
4	ಮೇಗರವಳ್ಳಿ ಡಿಟೋ	95
5	ಮಾಳೂರು ಡಿಟೋ	66
6	ಹುಮಚಕಟ್ಟೆ ಡಿಟೋ	44
7	ಆವಿನಹಳ್ಳಿ ಡಿಟೋ	26
8	ಪುಳವಿ ಡಿಟೋ	30

23. ಮುಂದಿನ ಮಿಟಿಂಗು ಏಪ್ರಿಲ್ ತಾರೀಖು 23ರಲ್ಲಿ ನಡೆಯಬೇಕೆಂತ ತೀರ್ಮಾನಿಸಲ್ಪಟ್ಟಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.